
# ‘೧೦೮ ಚೈತನ್ಯದಾಯಿನೀ – ಕಥಾಮಾಲಾ’

ಜೀವನ ಮೌಲ್ಯಗಳನ್ನು ಬೋಧಿಸುವ, ನೈತಿಕ-ಆಧ್ಯಾತ್ಮಿಕ ಆದರ್ಶಗಳನ್ನು ಎತ್ತಿ ಹಿಡಿಯುವ ಕಥೆಗಳನ್ನೊಳಗೊಂಡ ಹೊಸ ಗ್ರಂಥ ‘೧೦೮ ಚೈತನ್ಯದಾಯೀ-ಕಥಾ ಮಾಲಾ’ ಇತ್ತೀಚೆಗೆ ಪ್ರಕಟವಾಗಿದೆ. ರಾಮಾಯಣ, ಮಹಾಭಾರತ, ಭಾಗವತ ಮತ್ತು ಇತರ ಪುರಾಣ ಗ್ರಂಥಗಳಿಂದಲೂ, ಇನ್ನಿತರ ಮೂಲಗಳಿಂದಲೂ ಸಂಗ್ರಹಿಸಿದ ಕಥೆಗಳನ್ನು ಬೋಧಪ್ರದವಾಗುವಂತೆ ನಿರೂಪಿಸಿ, ಜನರೆಡೆಗೆ ತಲುಪಿಸುವ ಕೆಲಸವನ್ನು ಮಾಡುತ್ತಿದ್ದಾರೆ, ಲೇಖಕರಾದ ಡಾ. ವಾಗೀಶ್ವರೀ ಶಿವರಾಮ ಅವರು. ಈಗಾಗಲೇ ಹಲವು ವರ್ಷಗಳಿಂದ ಈ ದಿಕ್ಕಿನಲ್ಲಿ ಕೆಲಸ ಮಾಡುತ್ತ , ಹಲವಾರು ಉಪಯುಕ್ತ ಗ್ರಂಥ ಗಳನ್ನು ಅವರು ಪ್ರಕಟಿಸುತ್ತ ಬಂದಿದ್ದಾರೆ. ಈ ರೀತಿಯ ‘೧೦೮ ಕಥೆಗಳ ಸರಣಿಯಲ್ಲಿ ಇದು ೭ನೆಯದು’ ಎಂದು ಲೇಖಕರು ತಮ್ಮ ‘ಅಂತರಂಗದ ನುಡಿ’ಯಲ್ಲಿ ತಿಳಿಸಿ ದ್ದಾರೆ. ‘‘ಈ ಕೃತಿಯಲ್ಲಿರುವ ಜೀವನ ಮೌಲ್ಯಗಳನ್ನು ತಿಳಿಸಿಕೊಡುವ ಕಥೆಗಳು ಮನೋರಂಜನೆಯೊಂದಿಗೆ; ಮನೋಬುದ್ಧಿಗಳನ್ನೂ ಬೆಳಗಿ, ಸುಪ್ತವಾಗಿರುವ ಆತ್ಮ ಚೈತನ್ಯವನ್ನು ಜಾಗೃತಗೊಳಿಸುವಲ್ಲಿ ಪೂರಕ ಆಗಬಲ್ಲವಾದ್ದರಿಂದ ಕೃತಿಗೆ ‘ಚೈತನ್ಯ ದಾಯಿನೀ-ಕಥಾಮಾಲಾ’ ಎಂಬ ಅನ್ವರ್ಥವಾದ ನಾಮಕರಣ ಮಾಡಲಾಗಿದೆ’’ ಎಂದು ಲೇಖಕರು ಈ ಕೃತಿಯ ಹಿನ್ನೆಲೆಯನ್ನು ತಿಳಿಸುತ್ತಾರೆ.



**ಕೃತಿ: 108 ಚೈತನ್ಯದಾಯಿನೀ- ಕಥಾಮಾಲಾ**
**ಲೇಖಕರು : ಡಾ. ವಾಗೀಶ್ವರೀ ಶಿವರಾಮ**
**ಪ್ರಕಾಶನ : ವಾಗೀಶ್ವರಿ ಪ್ರಕಾಶನ**
**ಸರ್ಕಾರಿ ಕಾಲೇಜು ರಸ್ತೆ , ಶಂಕರನಗರ,**
**ಕಾವೂರು, ಮಂಗಳೂರು – 575015**
**ಮೊ.: 9986200736**
**ಬೆಲೆ: 200 / – ಪುಟ: 217**

ಶೀರ್ಷಿಕೆಯೇ ತಿಳಿಸಿ ಕೊಡುವಂತೆ, ಈ ಗ್ರಂಥದಲ್ಲಿ ಒಟ್ಟು ೧೦೮ ಕಥೆಗಳಿವೆ. ಈ ಕಥೆಗಳನ್ನು ನಾಲ್ಕು ಅಧ್ಯಾಯಗಳಾಗಿ ವಿಂಗಡಿಸಲಾಗಿದೆ: 1) ರಾಮಾಯಣ, ಮಹಾ ಭಾರತ, ಪುರಾಣ, ಐತಿಹಾಸಿಕ ಕಥೆಗಳು *(೩೩ ಕಥೆಗಳಿವೆ.)* 2) ಕೌಟುಂಬಿಕ ಪರಿಸರದ ಜೀವನಜ್ಯೋತಿ ಕಥೆಗಳು *(೧೩ ಕಥೆಗಳಿವೆ)*. 3) ಸಾಮಾಜಿಕ ಪರಿಸರದ ‘ಚೈತನ್ಯ ದಾಯಿನೀ’ ಕಥೆಗಳು *(೩೫ ಕಥೆಗಳಿವೆ)*. 4) ಆಧ್ಯಾತ್ಮಿಕ ತತ್ತ್ವದ ಜೀವನಜ್ಯೋತಿ ಕಥೆ ಗಳು *(೨೭ ಕಥೆಗಳು.)*


ಈ ಸರಣಿಯ ಹಿಂದಿನ ಪುಸ್ತಕಗಳಂತೆ, ಇಲ್ಲಿಯೂ ಕಥೆಗಳನ್ನು ಹೇಳುವ ವಿಧಾನದಲ್ಲಿ ಕೆಲವು ವಿಶೇಷ ಸಂಗತಿಗಳಿವೆ: ೧. ಶೀರ್ಷಿಕೆಗಳು ತುಸು ದೀರ್ಘ ವಾಗಿದ್ದು, ಕಥೆಗಳ ಸಾರವನ್ನು ಸೂಚಿಸುವಂತಿವೆ. ೨. ಪ್ರತಿಯೊಂದು ಕಥೆಯ ಶೀರ್ಷಿಕೆಗೂ ಒಂದೊಂದು ಉಪ ಶೀರ್ಷಿಕೆಗಳಿವೆ. ಇವು ಕಥಾವಸ್ತುವನ್ನು ಇನ್ನಷ್ಟು ವಿಶದಪಡಿಸುತ್ತವೆ; ಪ್ರಧಾನ ಶೀರ್ಷಿಕೆಯು ಕಥೆಯ ಸಾರ, ನೀತಿ ಅಥವಾ ತತ್ತ್ವವನ್ನು ತಿಳಿಸಿಕೊಟ್ಟರೆ, ಉಪ-ಶೀರ್ಷಿಕೆಯು ಕಥೆಯ ಚೌಕಟ್ಟನ್ನು (ವ್ಯಕ್ತಿ , ಪರಿಸರ ಘಟನೆ ಇತ್ಯಾದಿ) ತಿಳಿಸಿಕೊಡುತ್ತದೆ. ಈ ಮೂಲಕ ಎರಡು ಶೀರ್ಷಿಕೆಗಳ ಮೂಲಕವೇ ಕಥೆಯ ವಿಷಯವೇನೆಂಬುದು ಸ್ವಲ್ಪಮಟ್ಟಿಗೆ ತಿಳಿದುಬರುತ್ತದೆ. ಓದುವವರಿಗೆ ಕುತೂಹಲ ಮೂಡಿಸಲು ಇಷ್ಟು ಸಾಕು. ಇವನ್ನು ನೋಡಿಯೇ ‘ಓದಬೇಕು’ ಎಂಬ ಇಚ್ಛೆ ಮೂಡಬಹುದು. ೩. ಪ್ರತಿಯೊಂದು ಕಥೆಯ ಕೊನೆಯಲ್ಲಿ ಅದಕ್ಕೆ ಒಪ್ಪುವಂತಹ ಒಂದು ಶ್ಲೋಕ ಅಥವಾ ಸುಭಾಷಿತದ ಸಾಲು, ಅದರ ಅರ್ಥ. ಇವು ಕಥೆಯ ನೀತಿಯನ್ನು ಸ್ಪಷ್ಟವಾಗಿ ಮನದಟ್ಟು ಮಾಡಿಕೊಡು ವಂತಿವೆ. ವಿದ್ಯಾರ್ಥಿಗಳಿಗೆ, ಅಧ್ಯಾಪಕರಿಗೆ ಹಾಗೂ ಸಮಾಜದ ಎಲ್ಲ ವರ್ಗಗಳ ಜನರಿಗೂ ಆಪ್ತವಾಗುವಂತಹ ಕಥೆಗಳು ಇಲ್ಲಿವೆ.

ಓದುವ ಹವ್ಯಾಸ ಮರೆಯಾಗುತ್ತಿರುವ ಈ ದಿನಗಳಲ್ಲಿ ಕಥೆಗಳ ರುಚಿಯನ್ನು ಮೂಡಿಸಿ, ಜನರನ್ನು ಓದಿನತ್ತ ಸೆಳೆಯಬೇಕು ಹಾಗೂ ಜೀವನದಲ್ಲಿ ಓದು ಅತ್ಯಂತ ಅಮೂಲ್ಯವಾದ ಚಟುವಟಿಕೆ ಎಂಬ ಲೇಖಕರ ಕಾಳಜಿಯನ್ನು ನಿಜಕ್ಕೂ ಅಭಿನಂದಿಸಬೇಕು. ‘‘ಸಮೂಹ ಮಾಧ್ಯಮಗಳು; ಜನಸಾಮಾನ್ಯರ ಬುದ್ಧಿಯನ್ನು ಮಂಕುಗೊಳಿಸಿದ್ದರೂ, ಅವರನ್ನು ಜಾಗೃತಗೊಳಿಸುವ ಪ್ರಯತ್ನಗಳೂ ಸಜ್ಜನ ಸಹೃ ದಯರಿಂದ ನಿರಂತರವಾಗಿ ನಡೆಯುತ್ತಿರುವುದು ಶ್ಲಾಘನೀಯ’’ ಎನ್ನುತ್ತಾರೆ ಲೇಖಕರು. ಮುಂದುವರಿದು, ‘‘ಮೊಬೈಲ್ ಗೀಳಿನಿಂದ ಮುಕ್ತವಾಗಲು, ಕೈಗೆ ಪುಸ್ತಕ ಕೊಡುವುದೇ ಮದ್ದು. ಮಕ್ಕಳಿಗೆ, ಅತಿಥಿಗಳಿಗೆ, ಆತ್ಮೀಯರಿಗೆ, ಬಂಧು-ಬಾಂಧವರಿಗೆ, ಸಭೆ-ಸಮಾರಂಭ ಗಳಲ್ಲೂ ಸದಭಿರುಚಿ ಹುಟ್ಟಿಸುವ ಪುಸ್ತಕಗಳನ್ನು ಉಡುಗೊರೆಯಾಗಿ ಕೊಡುವ, ಪುಸ್ತಕ ಓದುವ, ಕೊಳ್ಳುವ ಸಂಸ್ಕೃತಿಯನ್ನು ರೂಢಿಸಿ ಕೊಳ್ಳಬೇಕಾಗಿದೆ. ಈ ನಿಟ್ಟಿನಲ್ಲಿ ಪರಸ್ಪರ ಸಹಕಾರ, ಜಾಗೃತಿ ಮೂಡಿಸುವುದೂ ರಾಷ್ಟ್ರೀಯ ಕಾರ್ಯವೇ ಆಗಿದೆ’’ ಎನ್ನುತ್ತಾರೆ. ಕಥೆಗಳ ಉದ್ದಕ್ಕೂ ಸಂಸ್ಕೃತಿ, ಅಧ್ಯಾತ್ಮ, ನೀತಿ, ಮೌಲ್ಯಗಳನ್ನು ಜನರಲ್ಲಿ ಪಸರಿಸುವ ಲೇಖಕರ ಕಾಳಜಿ ವಿಶೇಷವಾಗಿ ವ್ಯಕ್ತವಾಗಿದೆ.

# 'ಔನ್ನತ್ಯದತ್ತ', 'ವಿವೇಕಧಾರಾ'

ರಾಮಕೃಷ್ಣ ಮಹಾಸಂಘದ ಪರಮಾಧ್ಯಕ್ಷರಾಗಿರುವ ಶ್ರೀಮತ್ ಸ್ವಾಮಿ ಗೌತಮಾನಂದಜಿ ಮಹಾರಾಜ್ ಅವರ ಲೇಖನಗಳನ್ನು ಕನ್ನಡಕ್ಕೆ ಅನುವಾದಿಸಿ, ಸಂಕಲನ ರೂಪದಲ್ಲಿ ಹೊರತಂದ ಕೃತಿಯೇ '**ಔನ್ನತ್ಯದತ್ತ**.' ಇದನ್ನು ಅನುವಾದಿಸಿದವರು ತುಮಕೂರಿನಲ್ಲಿ ಪ್ರಾಧ್ಯಾಪಕರಾಗಿರುವ ಡಾ. ಜೆ. ನರೇಂದ್ರ ಅವರು. ತುಮಕೂರು ರಾಮಕೃಷ್ಣ-ವಿವೇಕಾನಂದ ಆಶ್ರಮವು ಈ ಗ್ರಂಥವನ್ನು ಪ್ರಕಟಿಸಿದೆ. ತುಮಕೂರು ಆಶ್ರಮದ ಅಧ್ಯಕ್ಷರಾದ ಸ್ವಾಮಿ ವೀರೇಶಾನಂದ ಸರಸ್ವತೀ ಅವರು ಬರೆದ ಪರಿಚಯಾತ್ಮಕ 'ಪ್ರಕಾಶಕರ ನುಡಿ'ಯೂ ಆರಂಭದಲ್ಲಿದೆ.

ಈ ಕೃತಿಯಲ್ಲಿ ಹತ್ತು ಲೇಖನಗಳಿವೆ. 'ರಾಮಕೃಷ್ಣ ಆಂದೋಲನದ ಜಾಗತಿಕ ಪರಿಣಾಮಗಳು', 'ಸ್ವಾಮಿ ವಿವೇಕಾನಂದ – ಭಾರತೀಯ ಸಂಸ್ಕೃತಿಯ ನೈಜ ಪ್ರತಿನಿಧಿ', 'ಸ್ವಾಮಿ ವಿವೇಕಾನಂದರು ಪ್ರತಿಪಾದಿಸಿದ ಜೀವನತತ್ತ್ವ', 'ಪುರುಷಸಿಂಹ ಈಕ್ಷಿಸಿದಂತೆ ಪುರುಷಾರ್ಥಗಳು', 'ವಿವೇಕ ಹೊಳಹಿನಲ್ಲಿ ಜಗತ್ತಿನ ತಿಳಿಹು', 'ವಿವೇಕ ಉಕ್ತಿ ಯುವಶಕ್ತಿಗೆ ನಿರಂತರ ಸ್ಫೂರ್ತಿ' 'ವಿಪುಲಾಶ್ರಯವನೀವ ಸುಫಲಸುಮಭರಿತ...', 'ಸಾಂತದಿಂದ ಅನಂತದ ವರೆಗೆ', 'ಶಿಕ್ಷಣವು ಮೌಲ್ಯಯುತವಾದಾಗ', 'ಯತೀಶ್ವರಾನಂದರೆಂಬ ಯತಿಕುಲ ಶಿರೋಮಣಿ' — ಇವೇ ಆ ಲೇಖನಗಳು. ಶೀರ್ಷಿಕೆಗಳಿಂದಲೇ ತಿಳಿದುಬರುವಂತೆ, ಹೆಚ್ಚಿನ ಲೇಖನಗಳು ಸ್ವಾಮಿ ವಿವೇಕಾನಂದರನ್ನು ಕುರಿತೇ ಇವೆ. ಪೂಜ್ಯ ಸ್ವಾಮಿ ಗೌತಮಾನಂದಜಿ ಮಹಾರಾಜ್ ಅವರು ತಮ್ಮ ಸುದೀರ್ಘ ಸಂನ್ಯಾಸಿ ಜೀವನದಲ್ಲಿ ಕಂಡುಂಡ ಜೀವನದ ಆಳವಾದ ಅರ್ಥಗಳ ಕಾಣ್ಕೆ ಇಲ್ಲಿದೆ. ಆಧ್ಯಾತ್ಮಿಕ ಸಾಧಕರು ಹಾಗೂ ದಿವ್ಯತ್ರಯರ ಅನುಯಾಯಿಗಳು ಅಗತ್ಯವಾಗಿ ಓದಬೇಕಾದ ಕೃತಿ ಇದಾಗಿದೆ.





**ಕೃತಿ:** ಔನ್ನತ್ಯದತ್ತ
**ಲೇಖಕರು :** ಸ್ವಾಮಿ ಗೌತಮಾನಂದ
**ಪ್ರಕಾಶನ :** ರಾಮಕೃಷ್ಣ-ವಿವೇಕಾನಂದ ಆಶ್ರಮ, ತುಮಕೂರು
ಮೊ.: 9448268280
**ಬೆಲೆ:** 150/- **ಪುಟ:** 140

---

'ವಿವೇಕಧಾರಾ' – ಈ ಕೃತಿಯು ತುಮಕೂರು ರಾಮಕೃಷ್ಣ-ವಿವೇಕಾನಂದ ಆಶ್ರಮದ ಅಧ್ಯಕ್ಷರಾದ ಸ್ವಾಮಿ ವೀರೇಶಾನಂದ ಸರಸ್ವತೀ ಅವರು ಬರೆದ ೩೭ ಲೇಖನಗಳ ಸಂಗ್ರಹವಾಗಿದೆ. ಕೃತಿಯ ಶೀರ್ಷಿಕೆಯೇ ಸೂಚಿಸುವಂತೆ, ಸ್ವಾಮಿ ವಿವೇಕಾನಂದರನ್ನು ಕುರಿತು ಬರೆದ ಲೇಖನಗಳ ಸಂಕಲನವಿದು. ಪತ್ರಿಕೆಗಳಲ್ಲಿ ವಿವಿಧ ಸಂದರ್ಭಗಳಲ್ಲಿ ಪ್ರಕಟವಾದ ಲೇಖನಗಳು ಇಲ್ಲಿ ಐದು ಅಧ್ಯಾಯಗಳಲ್ಲಿ ಅಡಕವಾಗಿವೆ. 'ವಿವೇಕ ಅಂಕುರ', 'ವಿವೇಕ ದಿಕ್ಸೂಚಿ', 'ವಿವೇಕ ಯಾನ', 'ವಿವೇಕ ಪಾಂಚಜನ್ಯ', 'ವಿವೇಕ ಪ್ರವಹನ' – ಈ ಐದು ಅಧ್ಯಾಯಗಳ ಹೆಸರುಗಳೇ ಸ್ವಾಮಿ ವಿವೇಕಾನಂದರ ಜೀವನದ ಐದು ಹಂತಗಳನ್ನು ಸೂಚಿಸುತ್ತವೆ. ಸ್ವಾಮೀಜಿ ಕುರಿತ ಲೇಖನಗಳನ್ನು ಈ ಬೆಳವಣಿಗೆಗೆ ಅನುಗುಣವಾಗಿ ಜೋಡಿಸಿರುವುದು, ಸಂಕಲನಕ್ಕೆ ಒಂದು ಸಮಗ್ರತೆಯನ್ನು ತಂದುಕೊಟ್ಟಿದೆ.

ಆದರೆ ಇಲ್ಲಿನ ಲೇಖನಗಳು ಸ್ವತಂತ್ರವಾಗಿ, ಹಾಗೂ ಸ್ವಯಂಪೂರ್ಣವಾಗಿ ರಚಿತವಾದ ರಚನೆಗಳು ಎಂಬುದನ್ನು ಇಲ್ಲಿ ಗಮನಿಸುವುದು ಮುಖ್ಯ. ಸ್ವಾಮಿ ವಿವೇಕಾನಂದರ ವಿಚಾರಧಾರೆಗಳು ಪ್ರಸ್ತುತ ಸಮಾಜದ ಹತ್ತುಹಲವು ವಿದ್ಯಮಾನಗಳಿಗೆ ಹೇಗೆ ಪ್ರಸ್ತುತವಾಗುತ್ತವೆ; ಅವುಗಳ ಪ್ರೇರಣೆ-ಅನುಸರಣೆಗಳಿಂದ ಜಗತ್ತು ಕಂಡುಕೊಳ್ಳಬಹುದಾದ ಬದಲಾವಣೆ ಎಂಥದು; ಬದಲಾಗುತ್ತಿರುವ ಜಾಗತಿಕ ಸ್ವರೂಪಕ್ಕೆ ಸ್ವಾಮೀಜಿ ವಿಚಾರಗಳು ಯಾವ ರೀತಿ ಅತ್ಯಗತ್ಯವಾಗಿವೆ – ಇವೇ ಮೊದಲಾದ ಚಿಂತನಾಪೂರ್ಣ ವಿಷಯಗಳು ಇಲ್ಲಿವೆ. ಪರಮಪೂಜ್ಯ ಸ್ವಾಮಿ ಗೌತಮಾನಂದಜಿಯವರ ಆಶೀರ್ವಚನ, ಪೂಜ್ಯ ಸ್ವಾಮಿ ನಿರ್ಭಯಾನಂದ ಸರಸ್ವತೀ ಮಹಾರಾಜ್ ಅವರ ಮುನ್ನುಡಿ ಇವುಗಳಿಂದ ಕೃತಿಯು ಸಂಪನ್ನವಾಗಿದೆ.




**ಕೃತಿ:** ವಿವೇಕಧಾರಾ
**ಲೇಖಕರು :** ಸ್ವಾಮಿ ವೀರೇಶಾನಂದ ಸರಸ್ವತಿ
**ಪ್ರಕಾಶನ :** ರಾಮಕೃಷ್ಣ-ವಿವೇಕಾನಂದ ಆಶ್ರಮ, ತುಮಕೂರು
ಮೊ.: 9448268280
**ಬೆಲೆ:** 250/- **ಪುಟ:** 288